ಭುಜಗಳಿಗೆ ಇಳಿಬಿದ್ದ ಕುರುಳು, ಕಮಾನಿನಂತೆ ತೀಡಿದ ಹುಬ್ಬು, ತೆಳ್ಳಗೆ ಹಚ್ಚಿದ ಕಾಜಲ್, ಕಂಡೂ ಕಾಣದ ಸಣ್ಣ ಬಿಂದಿ ಅವಳ ವಯಸ್ಸನ್ನು ಮರೆಮಾಚುವಂತಿದ್ದವು. ಹಗುರವಾದ ಕ್ರೇಪ್ ಸೀರೆಗೆ ಮುಕ್ಕಾಲು ತೋಳಿನ ಡಿಸೈನರ್ ಕುಬುಸ, ಅವಳ ಸೌಂದರ್ಯಕ್ಕೆ ಮೆರುಗು ನೀಡಿತ್ತು.

ನನ್ನಲ್ಲಿನ ಗಂಡಸು ಹೊರಬಂದಿದ್ದ. ಅವಳ ಅಪ್ರತಿಮ ಚೆಲುವನ್ನು ಕಣ್ಣಲ್ಲೇ ಆಸ್ವಾದಿಸತೊಡಗಿದ್ದೆ. ಒಮ್ಮೆ ಸರಕ್ಕನೆ ಅವಳು ನನ್ನೆಡೆಗೆ ತಿರುಗಿದಾಗ ತಪ್ಪಿತಸ್ಥ ಭಾವದಿಂದ ತಲೆತಗ್ಗಿಸಿದೆ. ಮರುಕ್ಷಣ ಮಾಮೂಲು – ಅವಳು ಮಾತನಾಡುವಾಗ ನಗುವಾಗ ಮಿಂಚಿ ಮಾಯವಾಗುತ್ತಿದ್ದ ಕೆನ್ನೆಯ ಗುಳಿಯಲ್ಲಿ ನಾನು ಬಿದ್ದಾಗಿತ್ತು, ಮೇಲೆದ್ದು ಬರುವ ಉದ್ದೇಶ ಮರೆತು, ಅಲ್ಲೇ ಉಳಿಯುವ ಆಸೆ... ತರ್ಕ, ನೈತಿಕತೆಯ ಎಲ್ಲೆಯನ್ನು ಮೀರಿ.

ಉದಯನ ಕೊನೆ ತಮ್ಮನ ಲಗ್ನಪತ್ರಿಕೆ. ಗ್ರೂಪ್‌ನಲ್ಲಿ ಮೆಸೇಜ್ ಹಾಕಿದ್ದರೂ ಫಣಿ ಹೇಳಿದಂತೆ ಕೆಲಸದ ದಿನ, ಅದೂ ಬೆಳಗ್ಗೆಯ ಸಮಾರಂಭವಾದ್ದರಿಂದ ನಮ್ಮವರ ಹಾಜರಾತಿ ಕಡಿಮೆ. ಹೇಗೂ ನಾಡಿದ್ದು ಉದಯನ ಆತಿಥ್ಯ ರೆಸಾರ್ಟ್‌ನಲ್ಲಿ. ಅಲ್ಲಿ ಹೆಚ್ಚು ಜನ ಸೇರುವವರಿದ್ದೆವು.

ಸ್ವಲ್ಪ ಹೊತ್ತಿಗೆ, 'ಎಲ್ರು ನಡೀರಿ ಊಟಕ್ಕೆ, ಡೈನಿಂಗ್ ಹಾಲ್ ಮೇಲ್ಗಡೆ' ಎಂದು ಖುದ್ದು ಉದಯನೇ ಬಂದು, ನಮಗೆ ಕೂರಲು ವ್ಯವಸ್ಥೆ ಮಾಡಿ ಹೋದ.

'ನಮ್ಮ ಅಡುಗೆ ನಿಮಗೆ ಅಪರೂಪವೇನೋ ಚೆನ್ನಾಗಿ ಬಾರಿಸಿ' ನನ್ನ ಪಕ್ಕಕ್ಕೆ ಕುಳಿತಿದ್ದ ಸೃಜನಾಳ ಕಾಮೆಂಟ್.

'ಅವನೇನು ಹೊಸಬನೇ ನಿಮ್ಮ–ಗಿಮ್ಮ ಅನ್ನೋಕೆ? ನೀನು ಅನ್ನು ಸಾಕು' ಫಣಿ ಮಧ್ಯೆ ಬಂದ.

'ನಾಲ್ಕು ತಿಂಗಳಾಯ್ತು ಇಂಡಿಯಾಗೆ ವಾಪಸ್ಸಾಗಿ, ಆದರೂ ನಮ್ಮ ಊಟ ಗುಜರಾತಿನಲ್ಲಿ ಇಲ್ಲ ಬಿಡು. ನನ್ನ ಅಡುಗೆಯವನಿಗೆ ಬರೋದು ಬಾಜ್ರಾ ರೋಟಿ, ದಾಲ್, ಚಪಾತಿ, ಸಬ್ಜಿ, ಇವೇ ಥರದ್ದು, ಅವನು ಇಲ್ಲದಾಗ ಅನ್ನ, ಸಾಂಬಾರ್ ಮಾಡ್ಕೋತೀನಿ' ಎಂದೆ, ಬೆರಳಿಗೆ ಅಂಟಿದ್ದ ಅನಾನಸಿನ ಗೊಜ್ಜನ್ನು ನೆಕ್ಕುತ್ತ. ಎಲೆತುದಿ ಪಾಯಸವನ್ನು ಹಿಡಿದಿದ್ದ ನಾಲ್ಕೂ ಬೆರಳುಗಳನ್ನು ಅನಾಮತ್ತು ಬಾಯೊಳಗೆ ತುರುಕಿ ಆನಂದಿಸುತ್ತಿದ್ದ ಫಣಿಯನ್ನು ಮೆಚ್ಚುಗೆಯಿಂದ ನೋಡಿದೆ. 'ಹೀಗೇ ತಿನ್ಬೇಕು ಹಾಗೇ ತಿನ್ಬೇಕು ಅನ್ನೋವ್ರು ನನ್ನ ಪಕ್ಕ ಕೂರಲೇಬಾರದು, ಊಟ ತನ್ನಿಚ್ಛೆ ನೋಟ ಪರರಿಚ್ಛೆ ಏನಂತೀ?'

'ಹೌದು' ಎನ್ನುತ್ತಾ ಸೃಜನಾಳತ್ತ ನೋಡಿದೆ. ಕೋಸಂಬರಿ ಅಗಿಯುವಾಗ ಫಳಕ್ ಅಂತ ಗುಳಿ ಬೀಳುತ್ತಿದ್ದ ಕೆನ್ನೆ ಬಲು ಆಕರ್ಷಕವಾಗಿತ್ತು. ನನ್ನ ಎಲೆಯಲ್ಲಿ ಅವಳ ಮುಖವೇ ಕಂಡಾಗ ನಾನು ವಿಚಲಿತನಾಗಿದ್ದೆ.

'ನನಗೆ ಮೈಸೂರ್‌ಪಾಕ್ ಸೇರೋಲ್ಲ, ಬೇಡ ಅಂದ್ರೂ ಹಾಕಿದ್ದಾರೆ' ಸೃಜನಾ ಗೊಣಗಿದಳು. 'ನನಗೆ ಹಾಕು' ಎಂದು ಕೇಳಲು ಸಂಕೋಚ. 'ನನಗೆ ಶುಗರ್, ದುಬೆಗೆ ಹಾಕು ಪರವಾಗಿಲ್ಲ' ಫಣಿಯ ಮಾತಿಗೆ, 'ಪರವಾಗಿಲ್ಲ ತಾನೆ' ಎನ್ನುತ್ತಾ ತನ್ನ ಎಲೆಯಲ್ಲಿದ್ದ ಮೈಸೂರ್‌ಪಾಕ್ ತುಂಡನ್ನು ನನ್ನ ಎಲೆಗೆ ಹಾಕಿದಳು. ನಮ್ಮಿಬ್ಬರ ನಡುವಿನ ತೆರೆ ಕರಗತೊಡಗಿತೋ ಎಂಬ ಭ್ರಮೆ, 'ನನಗೆ ಇಷ್ಟ' ಎಂದು ಮುಖವರಳಿಸಿದೆ.

ಊಟದ ಅನಂತರ ತಾಂಬೂಲದ ಕವರ್ ಕೊಡುತ್ತ ಉದಯ, 'ದುಬೆ, ನೀನು ಬಂದದ್ದು ನನಗೆ ಅತೀವ ಸಂತೋಷ. ಹತ್ತು ವರ್ಷದ ಮೇಲಾಯ್ತು ನೋಡಿ. ಏನಿವೇ ನಾಡಿದ್ದು ಸಂಜೆ ಎಲ್ಲರೂ ಮಿಸ್ ಮಾಡದೇ ಬರಬೇಕು' ಎಂದು ಮರುಆಹ್ವಾನ ಕೊಟ್ಟ.

'ಇದನ್ನು ಏನ್ ಮಾಡಲಿ? ಇಳ್ಕೊಂಡಿರೋದು ಹೋಟೆಲಲ್ಲಿ' ತಾಂಬೂಲದ ಕವರಿನತ್ತ ನೋಡಿದೆ.

'ಇವಳಿಗೆ ಕೊಡು, ಕಾಯಿಹಲ್ವ ಚೆನ್ನಾಗಿ ಮಾಡ್ತಾಳೆ. ಒಂದ್ಸಲ ಟೇಸ್ಟ್ ಮಾಡಿದ್ದೀನಿ. ಸುಧೀಗೂ ಇಷ್ಟ, ಅಲ್ವ ಸೃಜಿ?'